ಸಿಸಿ ನಂ.**1717/2021**

**ಚಾಸಾ-5**

**ಪ್ರಾಸಾ-4**

**<u>ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.</u>**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ. 14.02.2023.**

**<u>ಮುಂದುವರೆದ ಮುಖ್ಯ ವಿಚಾರಣೆಃ</u> ಮಾನ್ಯ ಸಸಅ ರವರಿಂದ**

**1.** ದಿಃ 21.05.2018 ರಂದು ಪೋಲಿಸರು ನನ್ನನ್ನು ಗ್ರಾಮಿಣ ಪೋಲಿಸ ಠಾಣೆಗೆ ಕರೆಸಿದ್ದರು. ಹಾಗೂ ಸದರಿ ಸಮಯದಲ್ಲಿ ನನ್ನ ಜೊತೆ ಚಾಸಾ4 ರವರು ಸಹ ಇದ್ದರು. ಸದರಿ ದಿನ ಮದ್ಯಾಹ್ನ 2.00 ರಿಂದ 6.00 ವರೆಗೆ ಲ್ಯಾಪ್‌ಟಾಪ್‌ನಲ್ಲಿ ಮೊಬೈಲ್ ನಲ್ಲಿ ಇದ್ದ ಮೈಕ್ರೊ ಚಿಪ್ ನಲ್ಲಿ ಸಂಗ್ರಹವಾದ ಧ್ವನಿ ಸುರಳಿಯನ್ನು ನಮಗೆ ಹಚ್ಚಿ ತೋರಿಸಿದರು. ಸದರಿ ಧ್ವನಿ ಸುರಳಿಯಲ್ಲಿ ಎಸ್ ಪಿ ಎಂದು ಹೇಳಿ ಓರ್ವ ಮಹಿಳೆ ಸದರಿಯವರ ಪರಿಚಯವಿರುವ ಓರ್ವ ವ್ಯಕ್ತಿಯ ಚಿಕಿತ್ಸೆಗಾಗಿ ಹಣ ಬೇಕು ಮಾನವೀಯ ದೃಷ್ಟಿಯಿಂದ ಪ್ರತಿಯೊಬ್ಬರು ರೂ.2,000/- ನೀಡಬೇಕೆಂದು ಪ್ರತಿ ತರಬೇತಿ ಅಬ್ಯರ್ಥಿಗೆ ಸೂಚಿಸಲಾಗಿತ್ತು. ಸದರಿ ಮೈಕ್ರೊ ಚಿಪ್ ನ್ನು ಪಂಚನಾಮೆಯನ್ನು ಜರುಗಿಸುವುದರ ಮೂಲಕ ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಮದ್ಯಾಹ್ನ 2.00 ರಿಂದ 6.00 ರ ಮದ್ಯದಲ್ಲಿ ಮಾಡಲಾಗಿತ್ತು. ಸದರಿ ಮೈಕ್ರೊ ಚಿಪ್ ನ್ನು ಯಾರಿಂದ ಅಮಾನತುಪಡಿಸಿಕೊಳ್ಳಲಾಯಿತು ಎಂದು ಅವರ ಹೆಸರು ನನಗೆ ನೆನಪಿಲ್ಲ. ಸದರಿ ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**10** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.10(ಎ)** ಎಂದು ಗುರುತಿಸಲಾಯಿತು**.** ಸದರಿ ಮೆಮೊರಿ ಕಾರ್ಡ / ಮೈಕ್ರೊ ಚಿಪ್ ನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ಎಂಓ 4** ಎಂದು ಗುರುತಿಸಲಾಯಿತು**.**

**ಸಿಸಿ ನಂ.1717/2021**

**ಚಾಸಾ-5**

**ಪ್ರಾಸಾ-4**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ಹೆಚ್ ನಾಯ್ಕ ವಕೀಲರಿಂದ.</u>**

**1.** ಪೋಲಿಸರು ಪಂಚನಾಮೆಗೆ ಬರುವಂತೆ ನನಗೆ ನೊಟಸ ನೀಡಿದಾಗ ನಾನು ಕರ್ತವ್ಯದ ಮೇಲೆ ಇದ್ದೆ. ದಿಃ 22.05.2018 ರಂದು ಬೆಳಿಗ್ಗೆ 11.30 ರ ಸಮಯದಲ್ಲಿ ಪೋಲಿಸರು ನಮ್ಮ ಕಚೇರಿಗೆ ಬಂದಿದ್ದರು. ನಮ್ಮ ಕಚೇರಿ ಗ್ರಾಮಿಣ ಪೋಲಿಸ ಠಾಣೆಯ ಹಿಂಭಾಗ ಇದೆ. ಪೋಲಿಸರು ನನ್ನನ್ನು ಎರಡು ಪ್ರಕರಣದಲ್ಲಿ ಪಂಚನನ್ನಾಗಿ ಮಾಡಿದ್ದಾರೆ. ಪೋಲಿಸರು ದಿಃ 22.05.2018 ರಂದು ನನಗೆ ನೊಟಿಸ ನೀಡಿದ್ದರು. ನನಗೆ ನೊಟಿಸ ನೀಡಿದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಸದರಿ ದಿನ ನಾನು ಪೋಲಿಸ ಠಾಣೆಗೆ ಹೋದಾಗ ಮದ್ಯಾಹ್ನ 12.15 ಆಗಿತ್ತು. ಸದರಿ ದಿನ ನಾನು ಠಾಣೆಗೆ ಹೋದಾಗ 1 ಮತ್ತು 2 ನೇ ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಿನ ನಾವು ಆರೋಪಿತರ ಮನೆಗೆ ಪೋಲಿಸ ವಾಹನದಲ್ಲಿ ಹೋಗಿದ್ದು ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಆರೋಪಿತರ ಮನೆಗೆ ಹೊದಾಗ ಮದ್ಯಾಹ್ನ 1.00 ಆಗಿರಬಹುದು. ನಿಖರವಾದ ಸಮಯ ಗೊತ್ತಿಲ್ಲ. ಸದರಿ ದಿನ ನನ್ನ ಜೊತೆ ಚಾಸಾ4 ಹಾಗೂ ಪೋಲಿಸ ಸಿಬ್ಬಂದಿಯವರು ಬಂದಿದ್ದರು.

2. ಸದರಿ ಆರೋಪಿತರ ಮನೆ ಬಾಡಿಗೆ ಮನೆ ಎಂದು 1 ನೇ ಆರೋಪಿ ತಿಳಿಸಿದ್ದರು. ಪಂಚನಾಮೆಯಲ್ಲಿ ಆ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆಯ ಚಕಬಂದಿ ನನಗೆ ಈಗ ಹೇಳಲು ಬರುವುದಿಲ್ಲ. ಸದರಿ ಮನೆಗೆ ಎಷ್ಟು ಬಾಗಿಲು , ಕಿಡಕಿಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ ಒಂದು ಹಾಲ್ ಹಾಗೂ ಒಂದು ಬೆಡ್ ರೂಂ ಇತ್ತು ಎನ್ನುತಾತರೆ.

3. ಸದರಿ ನೋಕಿಯಾ ಕಂಪನಿಯ ಕೀ ಪ್ಯಾಡನ ಮೊಬೈಲ್ ನ ಮಾಡಲ್ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಮೊಬೈಲ್ ನಲ್ಲಿ 4 ಜಿ ಸಿಮ ಇತ್ತು

ಎಂದು ನಾನು ಪೋಲಿಸರ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೊಬೈಲ್ ಹಾಗೂ ಸಿಮ ಇದ್ದ ಬಗ್ಗೆ ನಾನು ಪೋಲಿಸರ ಹೇಳಿಕೆಯ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯ ಕೋಣೆಯಿಂದ 1 ನೇ ಆರೋಪಿ ಮೊಬೈಲ್ ನ್ನು ತೆಗೆದುಕೊಟ್ಟಿರುತ್ತಾರೆ. ನಿಪಿ.6 ಪಂಚನಾಮೆಯನ್ನು ಯಾರು ಬರೆದರು ಎಂದು ಅವರ ಹೆಸರು ಹೇಳಲು ಬರುವುದಿಲ್ಲ. ಸದರಿ ದಿನ ಆರೋಪಿತರ ಮನೆಯಲ್ಲಿ 1.30 ರಿಂದ 5.30 ವರೆಗೆ ಏನು ಮಾಡಲಾಯಿತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಸಾಕ್ಷಿ ಮುಂದುವರೆದು ಚರ್ಚೆ ಮಾಡುತ್ತಿದ್ದರು ಎನ್ನುತ್ತಾರೆ. ಸದರಿ ಸಮಯದಲ್ಲಿ ಫೋಟೊ ಯಾರು ತೆಗೆದರು ಎಂದು ಅವರ ಹೆಸರು ನನಗೆ ಹೇಳಲು ಬರುವುದಿಲ್ಲ.

4. ನಿಪಿ.6 ಪಂಚನಾಮೆಗೆ ನನ್ನ ಸಹಿಯನ್ನು ಠಾಣೆಯಲ್ಲಿ ಪಡೆಯಲಾಗಿದೆ. ಸದರಿ ಎಂಓ 4 ವೂಡಾಫೂನ ಕಂಪನಿಯ ಮೆಮೊರಿ ಕಾರ್ಡ ಆಗಿತ್ತು. ಅದರ ಕೆಪಾಸಿಟಿ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ದಿಃ 21.05.2018 ರಂದು ಸದರಿ ಮೆಮೊರಿ ಕಾರ್ಡ ನ್ನು ನಮಗೇ ಪ್ಲೇ ಮಾಡಿ ತೋರಿಸಲಾಗಿತ್ತು. ಸದರಿ ಮೆಮೊರಿ ಕಾರ್ಡನ್ನು ಮದ್ಯಾಹ್ನ 2.00 ರಿಂದ 6.00 ಒಳಗಾಗಿ ಪ್ಲೇ ಮಾಡ ತೋರಿಸಲಾಗಿತ್ತು ನಿಖರವಾದ ಸಮಯ ಹೇಳಲು ಬರುವುದಿಲ್ಲ. ಸದರಿ ಮೆಮೊರಿ ಕಾರ್ಡ ನ್ನು ಯಾರು ಪ್ಲೇ ಮಾಡಿ ತೋರಿಸಿದರು ಎಂದು ಅವರ ಹೆಸರು ಹೇಳಲು ಬರುವುದಿಲ್ಲ ಅವರು ಪೋಲಿಸ ಸಿಬ್ಬಂದಿಯಾಗಿದ್ದರು. ಸದರಿ ದಿನ ನಾನು ಪಂಚನಾಮೆ ಗೆ ಹೊಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಎಂಓ 1 ರಿಂದ 4 ವಸ್ತುಗಳನ್ನು ಅಮಾನತುಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಗೆ ಹಾಜರಾಗಲು ನಮ್ಮ ಕಚೇರಿಯಿಂದ ಪರವಾನಿಗೆ ನೀಡಿದ್ದರು. ಸದರಿ ಲಿಖಿತ ಪರವಾನಿಗೆಯನ್ನು ನಾನು ಪೋಲಿಸರಿಗೆ ನೀಡಿಲ್ಲ. ಸದರಿ

**ಸಿಸಿ ನಂ.1717/2021**

**ಚಾಸಾ-5**

**ಪ್ರಾಸಾ-4**

ದಿನ ನಾನು ಪಂಚನಾಮೆಗೆ ಹೋಗದೆ ಇದ್ದರೂ ಸಹ ಚಾಸಾ1 ರವರು ನೀಡಿದ ದೂರಿಗೇ ಅನುಕೂಲವಾಗಲಿ ಎಂದು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಲ್ಲ ಹಾಗೂ ಪೋಲಿಸರು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**

**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಧಾರವಾಡ.